# ಅರಣ್ಯ (ಸಂರಕ್ಷಣೆ) ಅಧಿನಿಯಮ, 1980

**5.5.2007ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 37ನೇ ಸಂಪುಟದ 1ನೇ ಸಂಚಿಕೆಯಲ್ಲಿ 156 ರಿಂದ 158ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ**

## ವಿಷಯಾನುಕ್ರಮಣಿಕೆ

ಪ್ರಕರಣಗಳು:

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಅರಣ್ಯಗಳನ್ನು ಮೀಸಲಿರಿಸದಿರುವಿಕೆಯ ಮೇಲೆ ಅಥವಾ ಅರಣ್ಯೇತರ ಉದ್ದೇಶಕ್ಕಾಗಿ ಅರಣ್ಯ ಭೂಮಿಯನ್ನು ಉಪಯೋಗಿಸುವುದರ ಮೇಲೆ ಪರಿಬಂಧ
3. ಸಲಹಾ ಸಮಿತಿಯ ರಚನೆ

3ಎ. ಅಧಿನಿಯಮದ ಉಪಬಂಧಗಳ ಉಲ್ಲಂಘನೆಗೆ ದಂಡ

3ಬಿ. ಪ್ರಾಧಿಕಾರಗಳಿಂದ ಮತ್ತು ಸರ್ಕಾರಿ ಇಲಾಖೆಗಳಿಂದ ಅಪರಾಧಗಳು

4. ನಿಯಮ ರಚನಾಧಿಕಾರ
5. ನಿರಸನ ಮತ್ತು ಉಳಿಸುವಿಕೆ

# ಅರಣ್ಯ (ಸಂರಕ್ಷಣೆ) ಅಧಿನಿಯಮ, 1980

(1980ರ ಅಧಿನಿಯಮ ಸಂಖ್ಯೆ 69)

[27ನೇ ಡಿಸೆಂಬರ್, 1980]

ಅರಣ್ಯಗಳ ಸಂರಕ್ಷಣೆಗಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಸಹಾಯಕವಾದ ಅಥವಾ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತೊಂದನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಅರಣ್ಯ (ಸಂರಕ್ಷಣೆ) ಅಧಿನಿಯಮ, 1980 ಎಂದು ಕರೆಯತಕ್ಕದ್ದು.

(2) ಇದು, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು 1980ರ ಅಕ್ಟೋಬರ್ 25ನೇ ದಿವಸದಿಂದ ಜಾರಿಗೆ ಬಂದಿದೆಯೆಂದು ಭಾವಿಸತಕ್ಕದ್ದು.

**2. ಅರಣ್ಯಗಳನ್ನು ಮೀಸಲಿರಿಸದಿರುವಿಕೆಯ ಮೇಲೆ ಅಥವಾ ಅರಣ್ಯೇತರ ಉದ್ದೇಶಕ್ಕಾಗಿ ಅರಣ್ಯ ಭೂಮಿಯನ್ನು ಉಪಯೋಗಿಸುವುದರ ಮೇಲೆ ಪರಿಬಂಧ.**- ಒಂದು ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಆ ಯಾವುದೇ ರಾಜ್ಯ ಸರ್ಕಾರವು ಅಥವಾ ಇತರ ಪ್ರಾಧಿಕಾರವು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯ ಹೊರತು,-

(i) (ಆ ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿರುವ "ಮೀಸಲಿಟ್ಟ ಅರಣ್ಯ" ಎಂಬ ಪದಾವಳಿಯ ಅರ್ಥವ್ಯಾಪ್ತಿಯೊಳಗೆ) ಯಾವುದೇ ಮೀಸಲಿಟ್ಟ ಅರಣ್ಯ ಅಥವಾ ಅದರ ಯಾವುದೇ ಭಾಗವನ್ನು, ಅದು ಮೀಸಲಾಗಿರುವುದು ನಿಂತು ಹೋಗತಕ್ಕದ್ದೆಂದು;

(ii) ಯಾವುದೇ ಅರಣ್ಯ ಭೂಮಿ ಅಥವಾ ಅದರ ಯಾವುದೇ ಭಾಗವನ್ನು ಯಾವುದೇ ಅರಣ್ಯೇತರ ಉದ್ದೇಶಕ್ಕಾಗಿ ಉಪಯೋಗಿಸಬಹುದೆಂದು;

(iii) ಯಾವುದೇ ಅರಣ್ಯ ಭೂಮಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಯಾರೇ ಖಾಸಗಿ ವ್ಯಕ್ತಿಗೆ ಅಥವಾ ಯಾವುದೇ ಪ್ರಾಧಿಕಾರಕ್ಕೆ, ನಿಗಮಕ್ಕೆ, ಏಜೆನ್ಸಿಗೆ ಅಥವಾ ಸರ್ಕಾರದ ಒಡೆತನ, ವ್ಯವಸ್ಥಾಪನೆ ಅಥವಾ ನಿಯಂತ್ರಣ ಹೊಂದಿರದ ಯಾವುದೇ ಇತರ ಸಂಸ್ಥೆಗೆ ಗುತ್ತಿಗೆ ಅಥವಾ ಇತರೆ ರೀತಿಯಲ್ಲಿ ಹಸ್ತಾಂತರಿಸಬಹುದೆಂದು;

(iv) ಯಾವುದೇ ಅರಣ್ಯ ಭೂಮಿ ಅಥವಾ ಅದರ ಯಾವುದೇ ಭಾಗವನ್ನು ಪುನರ್ ಅರಣ್ಯ ನಿರ್ಮಾಣಕ್ಕೆ ಅದನ್ನು ಉಪಯೋಗಿಸುವ ಉದ್ದೇಶಕ್ಕಾಗಿ ಆ ಭೂಮಿಯಲ್ಲಿ ಅಥವಾ ಅದರ ಭಾಗದಲ್ಲಿ ಸ್ವಾಭಾವಿಕವಾಗಿ ಬೆಳೆದ ಮರಗಳನ್ನು ತೆಗೆದುಹಾಕಬಹುದೆಂದು

- ನಿರ್ದೇಶಿಸಿ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

**ವಿವರಣೆ.**- ಈ ಪ್ರಕರಣದ ಉದ್ದೇಶಕ್ಕಾಗಿ, "ಅರಣ್ಯೇತರ ಉದ್ದೇಶಕ್ಕಾಗಿ" ಎಂದರೆ, ಯಾವುದೇ ಅರಣ್ಯ ಅಥವಾ ಅದರ ಭಾಗವನ್ನು,-

(ಎ) ಚಹ, ಕಾಫಿ, ಸಾಂಬಾರ ಪದಾರ್ಥಗಳು, ರಬ್ಬರ್, ತಾಳೆ, ಎಣ್ಣೆ ಸಸ್ಯಗಳು, ತೋಟಗಾರಿಕೆ ಬೆಳೆಗಳು ಅಥವಾ ಔಷಧಿ ಸಸ್ಯಗಳ ಸಾಗುವಳಿ ಉದ್ದೇಶಕ್ಕಾಗಿ;

(ಬಿ) ಪುನರ್ ಅರಣ್ಯ ನಿರ್ಮಾಣ ಹೊರತಾದ ಯಾವುದೇ ಉದ್ದೇಶಕ್ಕಾಗಿ,

- ಕಡಿದು ಹಾಕುವುದು ಅಥವಾ ತೆಗೆದು ಹಾಕುವುದು,

ಆದರೆ ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆ, ಅಭಿವೃದ್ಧಿ ಮತ್ತು ನಿರ್ವಹಣೆಗೆ ಸಂಬಂಧಿಸಿದ ಅಥವಾ ಸಹಾಯಕವಾದ ಯಾವುದೇ ಕಾಮಗಾರಿ ಅಂದರೆ, ತನಿಖಾ ಕಟ್ಟೆಗಳು, ಅಗ್ನಿಶಾಮಕ ಮಾರ್ಗಗಳು, ವೈರ್‌ಲೆಸ್ ಸಂಪರ್ಕಗಳ ಸ್ಥಾಪನೆ ಮತ್ತು ಬೇಲಿ, ಸೇತುವೆಗಳು ಮತ್ತು ಅಡಿಗಾಲುವೆಗಳು, ಅಣೆಕಟ್ಟುಗಳು, ನೀರಿನ ಹಳ್ಳ, ಕಂದಕ

ಗುರುತುಗಳು, ಗಡಿ ಗುರುತುಗಳು, ಕೊಳವೆ ಮಾರ್ಗ ನಿರ್ಮಾಣ ಅಥವಾ ಇತರ ಅಂಥ ಉದ್ದೇಶಗಳು ಇದರಲ್ಲಿ ಒಳಗೊಳ್ಳುವುದಿಲ್ಲ.

3. ಸಲಹಾ ಸಮಿತಿಯ ರಚನೆ.- ಕೇಂದ್ರ ಸರ್ಕಾರವು,-

(i) 2ನೇ ಪ್ರಕರಣದ ಮೇರೆಗೆ ಅನುಮೋದನೆಯನ್ನು ಕೊಡುವುದಕ್ಕೆ; ಮತ್ತು

(ii) ಕೇಂದ್ರ ಸರ್ಕಾರವು ಅದಕ್ಕೆ ಒಪ್ಪಿಸಬಹುದಾದಂಥ ಅರಣ್ಯಗಳ ಸಂರಕ್ಷಣೆಗೆ ಸಂಬಂಧಿಸಿದ ಯಾವುದೇ ಇತರ ವಿಷಯಕ್ಕೆ

- ಸಂಬಂಧಪಟ್ಟಂತೆ, ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಲು, ಅದು ಸೂಕ್ತವೆಂದು ಭಾವಿಸುವಷ್ಟು ಸಂಖ್ಯೆಯ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಬಹುದು.

**3ಎ. ಅಧಿನಿಯಮದ ಉಪಬಂಧಗಳ ಉಲ್ಲಂಘನೆಗೆ ದಂಡ.**- 2ನೇ ಪ್ರಕರಣದ ಯಾವುದೇ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಉಲ್ಲಂಘನೆಗೆ ದುಷ್ಪ್ರೇರಣೆ ಮಾಡುವ ಯಾರೇ ಆಗಲಿ, ಹದಿನೈದು ದಿವಸಗಳವರೆಗೆ ವಿಸ್ತರಿಸಬಹುದಾದ ಅವಧಿಯವರೆಗಿನ ಸಾದಾ ಕಾರಾವಾಸದಿಂದ ದಂಡನೀಯನಾಗತಕ್ಕದ್ದು.

**3ಬಿ. ಪ್ರಾಧಿಕಾರಗಳಿಂದ ಮತ್ತು ಸರ್ಕಾರಿ ಇಲಾಖೆಗಳಿಂದ ಅಪರಾಧಗಳು.**- (1) ಈ ಅಧಿನಿಯಮದ ಮೇರೆಗೆ,-

(ಎ) ಯಾವುದೇ ಅಪರಾಧವನ್ನು ಸರ್ಕಾರದ ಯಾವುದೇ ಇಲಾಖೆಯು ಮಾಡಿದ್ದರೆ, ಆ ಇಲಾಖಾ ಮುಖ್ಯಸ್ಥನು; ಅಥವಾ

(ಬಿ) ಯಾವುದೇ ಅಪರಾಧವನ್ನು ಯಾವುದೇ ಪ್ರಾಧಿಕಾರವು ಮಾಡಿದ್ದರೆ, ಅಪರಾಧವು ನಡೆದ ಕಾಲದಲ್ಲಿ ಪ್ರಾಧಿಕಾರದ ನೇರ ಪ್ರಭಾರದಲ್ಲಿದ್ದ ಮತ್ತು ಪ್ರಾಧಿಕಾರದ ವ್ಯವಹಾರಗಳನ್ನು ನಡೆಸಲು ಪ್ರಾಧಿಕಾರಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಪ್ರಾಧಿಕಾರವನ್ನು

- ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಉಪಪ್ರಕರಣದಲ್ಲಿರುವುದು ಯಾವುದೂ, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಯಲು ತಾನು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದನೆಂದು ಇಲಾಖಾ ಮುಖ್ಯಸ್ಥನು ಅಥವಾ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ ಯಾವುದೇ ದಂಡನೆಗೆ ಗುರಿಯಾಗತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಅಧಿನಿಯಮದ ಮೇರೆಗೆ ದಂಡನೀಯವಾಗತಕ್ಕ ಒಂದು ಅಪರಾಧವನ್ನು ಸರ್ಕಾರದ ಒಂದು ಇಲಾಖೆಯು ಅಥವಾ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಒಂದು ಪ್ರಾಧಿಕಾರವು ಮಾಡಿದ್ದು, ಮತ್ತು ಆ ಅಪರಾಧವನ್ನು, ಇಲಾಖೆಯ ಮುಖ್ಯಸ್ಥನನ್ನು ಹೊರತುಪಡಿಸಿ, ಯಾರೇ ಅಧಿಕಾರಿಯ ಅಥವಾ ಪ್ರಾಧಿಕಾರದ ಸಂಬಂಧದಲ್ಲಿ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ವ್ಯಕ್ತಿಗಳನ್ನು ಹೊರತುಪಡಿಸಿ, ಯಾರೇ ವ್ಯಕ್ತಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಮಾಡಲಾಯಿತೆಂದು ಅಥವಾ ಅವನ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ಅದು ಉಂಟಾಯಿತೆಂದು ಹೇಳಬಹುದಾದ ರೀತಿಯಲ್ಲಿ ರುಜುವಾತಾದರೆ, ಅಂಥ ಅಧಿಕಾರಿ ಅಥವಾ ವ್ಯಕ್ತಿಗಳನ್ನು ಸಹ ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅವರು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

**4. ನಿಯಮ ರಚನಾಧಿಕಾರ.**- (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಪೂರ್ವೋಕ್ತ ಅಧಿವೇಶನವು ಅಥವಾ ನಿರಂತರ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು

ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**5. ನಿರಸನ ಮತ್ತು ಉಳಿಸುವಿಕೆ.-** (1) ಅರಣ್ಯ (ಸಂರಕ್ಷಣೆ) ಅಧ್ಯಾದೇಶ, 1980 ನ್ನು (1980ರ 17) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವಿದ್ದಾಗ್ಯೂ, ಸದರಿ ಅಧ್ಯಾದೇಶದ ಉಪಬಂಧಗಳ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು, ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

* * *